

# ಬಂದಳಿಕೆಯ ಶಿವದೇವಾಲಯಗಳು

**ಪ್ರಸ್ತುತ ಬಂದಳಿಕೆಯ ಪ್ರಮುಖ ಆಕರ್ಷಣೆಯೆಂದರೆ ಇಲ್ಲಿನ ಸುಂದರ ಪರಿಸರದಲ್ಲಿರುವ ಶಿವದೇವಾಲಯಗಳು ಹಾಗೂ ದೇವಾಲಯಕ್ಕೆ ಅನತಿ ದೂರದಲ್ಲಿರುವ ಶಾಂತಿನಾಥ ಬಸದಿ.**

ಚಿತ್ರ– ಲೇಖನ: **ಎ.ಜಿ. ಲಕ್ಷ್ಮೀನಾರಾಯಣ**

ಬಂದಳಿಕೆ ಎಂದು ಕೆಲವು ಶಾಸನಗಳಲ್ಲಿ ಉಲ್ಲೇಖಿಸಲ್ಪಟ್ಟ ಸ್ಥಳವು ಪುರಾತನ ನಾಗರಖಂಡ–70 ಎಂಬ ಪಟ್ಟಣವಾಗಿದ್ದು ಇದು ಕಾಳಾಮುಖ ಶೈವ ಪಂಥದ ಹಾಗೂ ಜೈನಧರ್ಮೀಯರ ಪ್ರಮುಖ ಶ್ರದ್ಧಾಕೇಂದ್ರವಾಗಿತ್ತು. 7ನೇ ಶತಮಾನದಿಂದ 12ನೇ ಶತಮಾನದವರೆಗಿನ ರಾಷ್ಟ್ರಕೂಟ, ಕಲ್ಯಾಣಚಾಲುಕ್ಯ, ಹೊಯ್ಸಳ, ಸೇವುಣ ಹಾಗೂ ವಿಜಯನಗರ ಚಕ್ರಾಧಿಪತ್ಯದ ಕಾಲಾವಧಿ–ಯಲ್ಲಿಯೂ ಇದು ಪ್ರಮುಖ ಪಟ್ಟಣಗಳೊಲ್ಲೊಂದಾಗಿತ್ತು. ಆದರೆ ಕಲ್ಯಾಣ ಚಾಲುಕ್ಯರ ಕಾಲಾವಧಿಯಾದ 11 ಮತ್ತು 12ನೆಯ ಶತಮಾನದಲ್ಲಿ ಈ ಪಟ್ಟಣ ಉಛ್ರಾಯ ಸ್ಥಿತಿಯಲ್ಲಿತ್ತೆಂದು ತಿಳಿದುಬರುತ್ತದೆ. ನಂತರ ಕ್ರಮೇಣ ತನ್ನ ಪ್ರಾಮುಖ್ಯತೆಯನ್ನು ಕಳೆದುಕೊಂಡು ಬಹುತೇಕ ನಿರ್ಜನ ಪ್ರದೇಶವಾಗಿ ಮಾರ್ಪಟ್ಟಿದೆ. ಸದ್ಯ ಬಂದಳಿಕೆ ಎಂಬುದು ಶಿಕಾರಿಪುರ ತಾಲ್ಲೂಕಿನಲ್ಲಿರುವ ಒಂದು ಕುಗ್ರಾಮ ಅಷ್ಟೆ. (ಶಿಕಾರಿಪುರದಿಂದ 40 ಕಿ.ಮೀ. ದೂರದಲ್ಲಿದೆ.)

ಪ್ರಸ್ತುತ ಬಂದಳಿಕೆಯ ಪ್ರಮುಖ ಆಕರ್ಷಣೆಯೆಂದರೆ ಇಲ್ಲಿನ ಸುಂದರ ಪರಿಸರದಲ್ಲಿರುವ ಶಿವದೇವಾಲಯಗಳು ಹಾಗೂ ದೇವಾಲಯಕ್ಕೆ ಅನತಿ ದೂರದಲ್ಲಿರುವ ಶಾಂತಿನಾಥ ಬಸದಿ. ತ್ರಿಮೂರ್ತಿನಾರಾಯಣ, ಸಹಸ್ರಲಿಂಗ, ಮಹಾನವಮಿ ದಿಬ್ಬ ಹಾಗೂ ಸೋಮೇಶ್ವರ ದೇವಾಲಯಗಳು ಬಹು ವಿಶಾಲವಾದ ಸಮುಚ್ಛಯದಲ್ಲಿದ್ದು ಕೆಲ ದಶಕಗಳ ಹಿಂದೆ ಪುನರ್ ನಿರ್ಮಾಣಗೊಂಡಿವೆ.

ತ್ರಿಮೂರ್ತಿನಾರಾಯಣ ಹಾಗೂ ಸೋಮೇಶ್ವರ ದೇವಾಲಯಗಳು ಈ ಸಮುಚ್ಛಯದ ಪ್ರಮುಖ ನಿರ್ಮಾಣಗಳಾಗಿವೆ. ಕ್ರಿ.ಶ. 1160 ರಲ್ಲಿ ನಿರ್ಮಾಣಗೊಂಡು ಪೂರ್ವಾಭಿಮುಖವಾಗಿ ನಿಂತ ತ್ರಿಮೂರ್ತಿನಾರಾಯಣ ದೇವಾಲಯವು ತ್ರಿಕೂಟಾಚಲ ಮಾದರಿಯದಾಗಿದ್ದು ಒಂದಕ್ಕೊಂದು ಹೊಂದಿಕೊಂಡಂತಿರುವ ಮೂರು ಪ್ರತ್ಯೇಕ ಗರ್ಭಗೃಹ ಹೊಂದಿದ್ದು ಮೂರೂ ಗರ್ಭಗೃಹಗಳು ತಮ್ಮದೇ ಆದ ಶಿಖರಗಳನ್ನೂ ಸಹ ಪಡೆದಿವೆ. ಕಲ್ಯಾಣ–ಚಾಲುಕ್ಯರ ಕಾಲಕ್ಕೆ ಸೇರಿದ ಈ ಮಂದಿರದ ಉತ್ತರ ಹಾಗೂ ದಕ್ಷಿಣಕ್ಕಿರುವ ಶಿಖರಗಳು ಸುಸ್ಥಿಯಲ್ಲಿದ್ದು ಪಶ್ಚಿಮದ ಶಿಖರವು ಭಗ್ನಗೊಂಡಿರುತ್ತದೆ.

ಭವ್ಯತೆಗೆ ಹಾಗೂ ಅಚ್ಚುಕಟ್ಟಾದ ನಿರ್ಮಾಣಕ್ಕೆ ಹೆಸರಾದ ದೇವಾಲಯದ ದಕ್ಷಿಣ ಹಾಗೂ ಪಶ್ಚಿಮದ ಗರ್ಭಗೃಹಗಳಲ್ಲಿ ಶಿವಲಿಂಗಗಳಿದ್ದು ಉತ್ತರದಲ್ಲಿ ವಿಷ್ಣುವಿನ ಮೂರ್ತಿಯಿದೆ. ಈ ಎಲ್ಲಾ ಗರ್ಭಗೃಹಗಳು ತಮ್ಮದೇ ಆದ ಅಂತರಾಳ, ಅಲಂಕೃತ ದ್ವಾರ ಹಾಗೂ ದೇವಕೋಷ್ಠಕಗಳನ್ನು ಹೊಂದಿವೆ. ದೇವಾಲಯದ ಹೊರಗೋಡೆಯು ಸರಳವಾಗಿದ್ದು ಅಲ್ಲಲ್ಲಿ ಅರೆಗಂಭಗಳಲ್ಲದೆ ಕಿರುಗೋಪುರಗಳಿಂದಲೂ ಅಲಂಕೃತಗೊಂಡಿದೆ. ಗರ್ಭಗೃಹದ ಶಿಖರಗಳು ತ್ರಿತಲವೇಸರ ವಿಮಾನ ಮಾದರಿಯಲ್ಲಿದ್ದು ತುದಿಯಲ್ಲಿ ಚೌಕಾಕಾರದ ಸ್ತೂಪಿಯಿಂದ ಕೂಡಿರುತ್ತದೆ.

ಶಿಖರಗಳಲ್ಲಿ ಅನೇಕ ಅರೆಯುಬ್ಬು ಕೆತ್ತನೆಗಳನ್ನು ನೋಡಬಹುದು.